## ಕಳೆದ ಸಂಚಿಕೆಯಲ್ಲಿ



ಸುಗಂಧಾ–ರಿತಿಕ್ ನಡುವಿನ ಪರಿಸ್ಪರ ಪರಿಚಯದ ಬಳಿಕ ಮತ್ತಷ್ಟು ಹತ್ತಿರವಾಗುತ್ತಾರೆ. ರಿತಿಕ್ ಕಂಪನಿ ಕೆಲಸದ ನಿಮಿತ್ತ ಪ್ರವಾಸ ಹೋಗುವಾಗ ಸುಗಂಧಾ ಜೊತೆಯಾಗುತ್ತಾಳೆ. ರಿತಿಕ್ ಮದುವೆಯ ಪ್ರಸ್ತಾಪ ಮಾಡಿದಾಗ, ಸ್ತ್ರೀಸ್ವಾತಂತ್ರ್ಯದ ಚಿಂತನೆ ಬಗ್ಗೆ ತಿಳಿಸುತ್ತಾ, ಲಿವಿಂಗ್ ರಿಲೇಶನ್ ಬಗ್ಗೆ ಹೇಳುತ್ತಾಳೆ. ಮದುವೆಯಾಗದೆ ಗಂಡು–ಹೆಣ್ಣು ಜೊತೆಯಾಗಿರಬಹುದು ಎನ್ನುವ ಪರಿಕಲ್ಪನೆ ಈಗೀಗ ಹೆಚ್ಚು ಪ್ರಚಲಿತವಾಗುತ್ತಿದೆ ಎಂಬುದರ ಚರ್ಚೆ ನಡೆಯುತ್ತದೆ. ಈ ಮಧ್ಯೆ ಸುಗಂಧಾ, ತನ್ನ ತಾಯಿ ತಂದೆಯರ ಒಡನಾಟದ ಸೂಕ್ಷ್ಮಚಿತ್ರಣವನ್ನು ವಿವರಿಸುತ್ತಾ ತನಗೊಬ್ಬ ತಮ್ಮ ಹುಟ್ಟಿದ್ದು, ಮೂರು ತಿಂಗಳಲ್ಲೇ ಮೃತಪಟ್ಟ ಸಂಗತಿ ಹೊರಹಾಕುತ್ತಾಳೆ. ತನ್ನ ಹುಟ್ಟುಹಬ್ಬವನ್ನು ಅಮ್ಮನೊಂದಿಗೆ ಆಚರಿಸಿದ ಸುಗಂಧಾ, ಅಮ್ಮ ಸಂಧಿನೋವಿನಿಂದ ಬಳಲುವುದನ್ನು ನೋಡಿ ಸಂಕಟಪಡುತ್ತಾಳೆ.

ಕೂತೆ. ಫಟ್‌ಫಟ್, ಫಟ್‌ಫಟ್ ಎಂದು ಸದ್ದು ಮಾಡುತ್ತಿದ್ದ ಆ ವಾಹನದ ಬಗ್ಗೆ ಅಮ್ಮ ನನ್ನ ಕಿವಿಯಲ್ಲಿ ಪಿಸುಗುಟ್ಟಿದಳು, 'ಇದು ಟೆಂಪೋ. ಇದನ್ನು ಇಲ್ಲಿ 'ವಟವಟ ಹಂದಿ' ಎಂದು ಕರೆಯುತ್ತಾರೆ.'

'ವಟವಟ ಹಂದಿ?' ನಾನು ನಕ್ಕೆ. ನಾನು ಗಟ್ಟಿಯಾಗಿ ನಗಬಾರದೆಂದು ಅಮ್ಮ ನನ್ನ ಕೈಯನ್ನು ಒತ್ತಿದರು. ನಾನು ತುಂಬಾ ಕಷ್ಟದಿಂದ ನನ್ನ ನಗುವನ್ನು ತಡೆದುಕೊಂಡೆ. ನಂತರ ಟೆಂಪೋದಿಂದ ಹೊರಗೆ ನೋಡಿದೆ. ದೊಡ್ಡದೊಡ್ಡ ಅಂಗಡಿಗಳು, ತುಂಬಾ ಗದ್ದಲ, ವಾಹನಗಳ ಓಡಾಟ... ನಾನು ನಗುವನ್ನು ತುಂಬಾ ಕಷ್ಟದಿಂದ ಸಂಭಾಳಿಸಿದ ನಂತರ ಟೆಂಪೋದಿಂದ ಹೊರಗೆ ನೋಡಿದೆ. ಭೋಪಾಲ್ ಮಂಡಲಾಗಿಂತ ಭಿನ್ನವಾಗಿತ್ತು.

'ಬೋರ್ಡ್ ಆಫೀಸ್‌ಗೆ ಇಳಿಸಪ್ಪಾ!' ಅಮ್ಮ ಟೆಂಪೋದ ಬಾಗಿಲನ್ನು ಹಿಡಿದು ಓಲಾಡುತ್ತಿದ್ದ ಯುವಕನಿಗೆ ಹೇಳಿದರು. ಸ್ವಲ್ಪ ಹೊತ್ತಿಗೆ ಬೋರ್ಡ್ ಆಫೀಸ್ ಬಂತು.

'ಬೋರ್ಡ್ ಆಫೀಸ್, ಬೋರ್ಡ್ ಆಫೀಸ್, ಬೋರ್ಡ್ ಆಫೀಸ್...' ಟೆಂಪೋ ನಿಧಾನವಾದಾಗ ಯುವಕ ಗಟ್ಟಿಯಾಗಿ ಹೇಳಿದ, ನಂತರ ತಾನೂ ಟೆಂಪೋದಿಂದ ಇಳಿದು ಬದಿಗೆ ನಿಂತ. ಅಮ್ಮ ಸೂಟ್‌ಕೇಸುಗಳನ್ನು ಕೆಳಗಿಳಿಸಿದರು, ನಾನೂ ಉತ್ಸಾಹದಿಂದ ಕೆಳಗಿಳಿದು ನಿಂತೆ. ನಾನು ನೋಡುತ್ತಿರುವಂತೆ, ಆ ಟೆಂಪೋ ಯುವಕ ಮತ್ತೆ ಟೆಂಪೋ ಹತ್ತಿದ. ಟೆಂಪೋ ಮುಂದಕ್ಕೆ ಸಾಗಿತು.

'ನಡಿ, ಇಲ್ಲಿಂದ ಕಾಲ್ನಡಿಗೆಯಲ್ಲಿ ಹೋಗಬೇಕಾಗುತ್ತೆ' ಅಮ್ಮ ಹೇಳಿದರು. ನಾನು ಈಗಲೂ ಒಂದು ಸೂಟ್‌ಕೇಸನ್ನು ಹಿಡಿದುಕೊಂಡೆ. ಮೊದಲ ಸೂಟ್‌ಕೇಸ್ ಹಗುರವಾಗಿತ್ತು, ಈ ಎರಡನೆಯ ಸೂಟ್‌ಕೇಸ್ ತುಂಬಾ ಭಾರವಾಗಿತ್ತು. ಅಲ್ಲಿರುವ ಮನೆಗಳು ತುಂಬಾ ಸುಂದರವಾಗಿದ್ದವು. ಎಲ್ಲಾ ಮನೆಗಳ ಎದುರು ಪೊದೆಗಳ ಬೇಲಿಗಳಿದ್ದವು. ಬೇಲಿಗಳಿಂದ ಆವೃತವಾಗಿದ್ದ ಅಂಗಳದಲ್ಲಿ ಹೂವುಗಳ ಸೌಂದರ್ಯ ಮನೋಹರವಾಗಿತ್ತು. ನಾನು ಆ ಮನೆಗಳನ್ನು ನೋಡುವ ಭರದಲ್ಲಿ ರಸ್ತೆಯನ್ನು ನೋಡುವುದನ್ನು ಮರೆತೆ. ಒಂದು ಕಲ್ಲಿಗೆ ಮುಗ್ಗರಿಸಿ ಬೀಳುವವಳಿದ್ದೆ, ಆದರೆ ಹೇಗೋ ಪಾರಾದೆ.

'ಜೋಪಾನ" ಅಮ್ಮ ಹೇಳಿದರು, ಆ ಸೂಟ್‌ಕೇಸನ್ನು ಸಹ ನನಗೇ ಕೊಡು.'

'ಇಲ್ಲ ಇಲ್ಲ. ನಾನು ಕಲ್ಲನ್ನು ನೋಡಲಿಲ್ಲ', ನಾನು ಸೂಟ್‌ಕೇಸ್ ಕೊಡಲು ಒಪ್ಪಲಿಲ್ಲ. ಎಡವಿದ್ದರಿಂದ ಸೂಟ್‌ಕೇಸ್ ಹಿಡಿದ ಕೈಗೆ ಆಘಾತವಾಗಿ ಹೆಗಲು ನೋಯುತ್ತಿತ್ತು, ಆದರೆ ನಾನು ಅಮ್ಮನ ಭಾರ ಹೆಚ್ಚಿಸುವುದನ್ನು ಬಯಸುತ್ತಿರಲಿಲ್ಲ. ನನಗೇನೂ ಆಗಿಲ್ಲ ಎಂಬುದನ್ನು ತೋರಿಸಲು ಪ್ರಯತ್ನಿಸುತ್ತಿದ್ದೆ. ಎರಡು ಮನೆಗಳ ನಡುವೆ ಒಂದು ಮೆಟ್ಟಿಲಿತ್ತು, ಅದರ ಮೇಲೆ ಹತ್ತಿ ನಾವಿಬ್ಬರು ಒಂದು ಅಂತಸ್ತು ಮೇಲೆ ಬಂದೆವು. ಮೇಲೆ ಎದುರುಬದರು ಎರಡು ಬಾಗಿಲುಗಳಿದ್ದವು. ಒಂದು ಬಾಗಿಲ ಪಕ್ಕದಲ್ಲಿ ಹಾಕಿದ್ದ ಕಾಲಿಂಗ್‌ಬೆಲ್‌ನ ಮೇಲೆ ಅಮ್ಮ ಬೆರಳನ್ನಿಟ್ಟಳು. ಕೆಲವೇ ನಿಮಿಷಗಳಲ್ಲಿ ಬಾಗಿಲು ತೆರೆಯಿತು.

'ಓಹ್, ಮಾಯಾ ಹೀಗೆ ಅಕಸ್ಮಾತ್?' ಬಾಗಿಲು ತೆರೆದ ಮಹಿಳೆ ಅಮ್ಮನನ್ನು ನೋಡುತ್ತಾ ಕೇಳಿದಳು.

'ಓಹ್, ಇವಳು ನಮ್ಮ ಸುಗಂಧಾ! ಈಗ ದೊಡ್ಡವಳಾಗಿದ್ದಾಳೆ.' ಆ ಮಹಿಳೆ ತುಂಬಾ ಪ್ರೀತಿಯಿಂದ ನನ್ನ ತಲೆಯ ಮೇಲೆ ಕೈಯಿಟ್ಟರು. ನಂತರ ಅವರು ಒಂದು ಸೂಟ್‌ಕೇಸ್ ಹಿಡಿದುಕೊಂಡರು, ಅಮ್ಮ ಇನ್ನೊಂದು ಸೂಟ್‌ಕೇಸ್ ಹಿಡಿದುಕೊಂಡರು. ಅವರು ನಮ್ಮನ್ನು ವರಾಂಡಕ್ಕೆ ಕರೆದೊಯ್ದರು. ವರಾಂಡ ತುಂಬಾ ಸುಂದರವಾಗಿತ್ತು.

'ಕೂತ್ಕೋ ಸುಗಂಧಾ' ಎಂದರು ಅವರು. ನಾನು ದಣಿದಿದ್ದೆ, ನಾನು ಕೂರಲೂ ಬಯಸುತ್ತಿದ್ದೆ. ನಾನು ಅಮ್ಮನನ್ನು ನೋಡಿದೆ. ಅಮ್ಮನ ಸೂಚನೆ ಪಡೆಯುತ್ತಲೇ ನಾನು ಸೋಫಾದಲ್ಲಿ ಕೂತೆ.

'ನೀವು ಕುಳಿತುಕೊಳ್ಳಿ, ನಾನು ಚಹಾ ಕಾಫಿ ತರುತ್ತೇನೆ, ಆಮೇಲೆ ಫ್ರೆಶ್ ಆಗುವಿರಂತೆ' ಆ ಮಹಿಳೆ ಹೇಳಿದರು.

'ಇವರು ನಿನ್ನ ನೂತನ್ ಸೋದರತ್ತೆ.' ಅಮ್ಮ ನನಗೆ ಹೇಳಿದರು. ನಂತರದಲ್ಲಿ ನನಗೆ, ನೂತನ್ ಸೋದರತ್ತೆ, ನನ್ನ ಸ್ವಂತ ಸೋದರತ್ತೆ ಆಗಿರಲಿಲ್ಲ ಎಂಬುದು ತಿಳಿಯಿತು. ಅವರು ನನ್ನ ಅಮ್ಮನ ಆತ್ಮೀಯ ಗೆಳತಿಯಾಗಿದ್ದರು. ಅವರು ಸೆಕ್ರೆಟೇರಿಯಟ್‌ನಲ್ಲಿ ನೌಕರಿ ಮಾಡುತ್ತಿದ್ದರು. ಅವರ ಪತಿ ಒಂದು ಔಷಧಿ ತಯಾರಿಸುವ ಕಂಪನಿಯಲ್ಲಿದ್ದರು, ಅವರು ಸಾಮಾನ್ಯವಾಗಿ ನಗರದಿಂದ ಹೊರಗಿರುತ್ತಿದ್ದರು. ಅವರಿಗೆ ಅದುವರೆಗೆ ಯಾವ ಮಕ್ಕಳಿರಲಿಲ್ಲ.

ನೂತನ್ ಸೋದರತ್ತೆ ಚಹಾ ತಿಂಡಿ ತರಲು ಒಳಗಿನ ಕೋಣೆಗೆ ಹೋದರು.

'ನಾನೀಗಲೇ ಬಂದೆ, ನೀನಿಲ್ಲೇ ಇರು.' ಅಮ್ಮ ಅವರನ್ನು ಹಿಂಬಾಲಿಸಿ ಹೋದರು. ಒಳಗಿನ ಕೋಣೆಯಿಂದ ಅಮ್ಮ ಬಿಕ್ಕಳಿಸುವ ಶಬ್ದ ಕೇಳಿಸಿತು; ನೂತನ್ ಸೋದರತ್ತೆಯವರು ಮೆಲು ಧ್ವನಿಯಲ್ಲಿ ಅವರಿಗೆ ಸಮಾಧಾನ ಹೇಳುವುದು ಸಹ ಕೇಳಿಸುತ್ತಿತ್ತು; ಆದರೆ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ, ಅರ್ಥವೂ ಆಗುತ್ತಿರಲಿಲ್ಲ. ಸ್ವಲ್ಪ ಹೊತ್ತಿನ ನಂತರ ಮೊದಲು ಅಮ್ಮ ಹೊರ ಬಂದರು. ಅವರು ಅತ್ತಿದ್ದರಿಂದಾಗಿ ಅವರ ಕಣ್ಣುಗಳು ಕೆಂಪಗಾಗಿದ್ದವು. ಕೆಲವೇ ಕ್ಷಣಗಳಲ್ಲಿ ನೂತನ್ ಸೋದರತ್ತೆ ಒಂದು ಟ್ರೇ ಹಿಡಿದು ಬಂದರು. ಟ್ರೇನಲ್ಲಿ ಚಹಾ ಮತ್ತು ಬಿಸ್ಕತ್‌ಗಳಿದ್ದವು. ನಾವು ಚಹಾಬಿಸ್ಕತ್ ಸೇವಿಸಿದೆವು.

'ನೀವು ಆರಾಮಾಗಿ ಸ್ನಾನ ಮಾಡಿ. ಅಡುಗೆ ಮನೆಯಲ್ಲಿ ಎಲ್ಲಾ ಸಾಮಾನುಗಳಿವೆ. ನಿಮಗೆ ಬೇಕಾದಂತೆ ಅಡುಗೆ ಮಾಡಿಕೊಳ್ಳಿ. ನಾನೇ ಅಡುಗೆ ಮಾಡಿಟ್ಟು ಹೋಗ್ತಿದ್ದೆ, ಆದರೆ ಆಫೀಸಿಗೆ ತಡವಾಗುತ್ತೆ.' ನೂತನ್ ಸೋದರತ್ತೆ ಹೇಳಿದರು.

'ಬೇಡಬೇಡ, ಯೋಚ್ನೆ ಮಾಡ್ಬೇಡ! ನಾನೆಲ್ಲಾ ಮಾಡಿಕೊಳ್ತೀನಿ. ಇವತ್ತು ನೀನು ನಾನು ಮಾಡಿದ ಅಡುಗೆಯನ್ನು ಊಟ ಮಾಡು', ಅಮ್ಮ ಮುಗುಳ್ನಗುತ್ತಾ ಹೇಳಿದರು. ಅಮ್ಮ ಹೀಗೆ ಮುಗುಳ್ನಕ್ಕಿದ್ದನ್ನು ನಾನು ಅನೇಕ ತಿಂಗಳುಗಳ ನಂತರ ನೋಡಿದ್ದೆ. ಅವರ ಮುಗುಳ್ನಗೆ ನನಗೆ ತುಂಬಾ ಇಷ್ಟವಾಯಿತು. ಸುಮಾರು ಒಂದು ತಿಂಗಳವರೆಗೆ ನಾವಿಬ್ಬರು ನೂತನ್ ಸೋದರತ್ತೆಯವರ ಮನೆಯಲ್ಲಿದ್ದೆವು. ಈ ನಡುವೆ ಅಪ್ಪಾ ನಮ್ಮನ್ನು ಕರೆದೊಯ್ಯಲು ಬರಲಿಲ್ಲ. ಅಮ್ಮ ಎರಡು ದಿನಗಳಿಗಾಗಿ ಅಜ್ಜಿಯ ಮನೆಗೆ ಹೋಗಿದ್ದರು.

'ನೋಡು ಸುಗಂಧಾ! ನಾನು ಎರಡು ದಿನ ನಿನ್ನ ಅಜ್ಜಿಯ ಮನೆಗೆ ಹೋಗಬೇಕು. ನೀನಿಲ್ಲೇ ಇರು. ನಿನ್ನ ಓದು ಮುಂದುವರೆಸು. ಸಾಧ್ಯವಾದರೆ ನಾನು ನಿನ್ನ ಟಿ.ಸಿ. ತಗೊಂಡು ಬರ್ತೀನಿ. ನಿನ್ನನ್ನು ಇಲ್ಲಿಯ ಶಾಲೆಗೆ ಸೇರಿಸ್ತೀನಿ.' ಅಮ್ಮ ನನಗೆ ತಿಳಿಯಪಡಿಸಿದ್ದರು, 'ಸುಗಂಧಾ, ಹೆದರಬೇಡ, ಈಗ ನೀನು ದೊಡ್ಡವಳಾಗಬೇಕು. ನೂತನ್ ಸೋದರತ್ತೆಯವರು ಹೇಳಿದಂತೆ ಕೇಳು, ಮನೆಯಲ್ಲಿಯೇ ಇರು'.